ವಿಷಯ : ರೈತರು ಬೆಳೆದಿರುವ ಭತ್ತ ಮತ್ತು ಅಕ್ಕಿಯನ್ನು ಜಿಲ್ಲೆಯ ವ್ಯಾಪ್ತಿಯಲ್ಲಿಯೇ ಮಾರಾಟ ಮಾಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೭೪ (೧೦೧೪)

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೈತರು ಬೆಳೆದಿರುವ ಭತ್ತ ಮತ್ತು ಅಕ್ಕಿ ಜಿಲ್ಲೆಯ ವ್ಯಾಪ್ತಿಯಲ್ಲಿಯೇ ಮಾರಾಟಕ್ಕಾಗಿ ತೆಗೆದುಕೊಂಡು ಹೋಗಲು ಸರ್ಕಾರದ ನಿರ್ಬಂಧನೆ ಇದೆಯೇ ? ಅಥವಾ ಕಾನೂನು ಬಾಹಿರವಾಗುತ್ತದೆಯೇ ?

ಆ) ಒಂದು ವೇಳೆ ಈ ಪ್ರಕಾರ ನಿರ್ಬಂಧವಿದ್ದರೆ ರೈತರಿಗೆ ಮಾರಾಟ ಮಾಡಲು ಅನಾನುಕೂಲವಾಗುವುದಿಲ್ಲವೇ ?

ಇ) ಈ ಪ್ರಕಾರವಿದ್ದರೆ ರೈತರ ಮಾರಾಟಕ್ಕಾಗಿ ಭತ್ತ ಮತ್ತು ಅಕ್ಕಿ ತೆಗೆದುಕೊಂಡು ಹೋಗಲು ಪರವಾನಗಿ ಸಲುವಾಗಿ ತೊಂದರೆ ಆಗುವುದಿಲ್ಲವೇ ?

ಈ) ಹಾಗಿದ್ದಲ್ಲಿ ರೈತರು ಮಾರಾಟ ಮಾಡಲು ಅನುಕೂಲಕ್ಕಾಗಿ ಈ ನಿರ್ಬಂಧವನ್ನು ಸಡಿಲಿಸಬಾರದೇಕೆ ?

ಉ) ಒಂದು ವೇಳೆ ಈ ನಿರ್ಬಂಧನೆ ಇಲ್ಲದಿದ್ದರೆ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲೂಕಿನಲ್ಲಿ ಸಹಾಯಕ ಆಯುಕ್ತರು ಕಡ್ತಾಲ ಗ್ರಾಮದ ರೈತನ ೨೦ ಚೀಲ ಅಕ್ಕಿಯನ್ನು ಮಾರಾಟಕ್ಕಾಗಿ ಒಯ್ಯುವಾಗ ತಡೆದು ವಶಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಊ) ಅಧಿಕಾರಿಗಳು ಈ ಪ್ರಕಾರ ರೈತರಿಗೆ ತೊಂದರೆ ಕೊಟ್ಟರೆ ಸರ್ಕಾರದವರು ಅಧಿಕಾರಿಗಳ ಮೇಲೆ ಕೈಕೊಳ್ಳುವ ಕ್ರಮವೇನು ? ಮತ್ತು ವಶಪಡಿಸಿಕೊಂಡಿರುವ ಅಕ್ಕಿ ಬಿಡುಗಡೆ ಮಾಡುವುದಕ್ಕೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಲೆವಿ ಮುಕ್ತ ಅಕ್ಕಿಯನ್ನು ಜಿಲ್ಲೆಯಲ್ಲಿಯೇ ಸಾಗಾಣಿಸಲು ಇಂತಹ ನಿರ್ಬಂಧನೆ ಇಲ್ಲ ಜಿಲ್ಲೆಯ ಒಳಗೆ ಭತ್ತ ಸಾಗಾಣಿಕೆಗೆ ನಿರ್ಬಂಧವಿಲ್ಲ

ಆ) ಉದ್ಭವಿಸುವದಿಲ್ಲ

ಇ) ಉದ್ಭವಿಸುವದಿಲ್ಲ

ಈ) ಉದ್ಭವಿಸುವದಿಲ್ಲ

ಉ) ಗುಲ್ಬರ್ಗಾ ಜಿಲ್ಲಾಧಿಕಾರಿಗಳು ವರದಿ ಮಾಡಿರುವಂತೆ ಸೇಡಂ ಉಪ ವಿಭಾಗಾಧಿಕಾರಿಗಳು ಸೇಡಂ ಗುಲ್ಬರ್ಗಾ ತಿರುವು ರಸ್ತೆಯ ಮೇಲೆ ೨೭ ಚೀಲ ಅಕ್ಕಿಯನ್ನು ಹಾಕಿದ್ದುದರಿಂದ ಮತ್ತು ಇದರ ಸಂಬಂಧ ಆಗ ಯಾರೂ ಯಾವ ದಾಖಲೆ ಹಾಜರು ಪಡಿಸದ ಕಾರಣ ಇದು ನ್ಯಾಯಬೆಲೆ ಅಂಗಡಿ ಅಥವಾ ಜವಾಹರ ರೋಜಗಾರ ಯೋಜನೆಗೆ ಸಂಬಂಧಿಸಿರಬಹುದೆಂಬ ಸಂಶಯ ಬಂದ ಕಾರಣ ಸದರಿ ಅಕ್ಕಿಯನ್ನು ಜಪ್ತು ಮಾಡಲಾಗಿದೆ ವಿಚಾರಣೆ ನಡೆಯುತ್ತಿದೆ

ಊ) ವರದಿ ತರಿಸಿ ಸೂಕ್ತ ಕ್ರಮ ಕೈಕೊಳ್ಳಲಾಗುವದು

ವಿಷಯ : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಚಾರದಲ್ಲಿ ಕಡಿತ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೭೯ (೧೭೪೪)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಸಂಕೇಶ್ವರ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜನಸಾಮಾನ್ಯರಿಗೆ ತೊಂದರೆಯಿದ್ದಾಗ ಬಸ್ಸುಗಳ ಸಂಚಾರವನ್ನು ನಿಲ್ಲಿಸಿದ್ದಕ್ಕೆ ಕಾರಣವೇನು ?

ಆ) ಸಿಬ್ಬಂದಿ ವರ್ಗಕ್ಕೆ ಬಸ್ ನಿಲುಗಡೆಯಿಂದ ತಲೆದೋರಿರುವ ಹೆಚ್ಚಿನ ಆರ್ಥಿಕ ಒತ್ತಡವನ್ನು ಕಡಿಮೆ ಮಾಡಲು ಸರ್ಕಾರದಿಂದ ತೆಗೆದುಕೊಳ್ಳಬಹುದಾದ ಕ್ರಮವೇನು ?

ಶ್ರೀ ಆಜೀಜ ಸೇಠ (ಸಾರಿಗೆ ಸಚಿವರು) :- ಅ) ಇಂಧನ ಪೂರೈಕೆ ಕಡಿತದ ಕಾರಣ ತಾತ್ಕಾಲಿಕವಾಗಿ ವಾಹನಗಳ ಕಾರ್ಯಾಚರಣೆಯನ್ನು ಕಡಿಮೆ ಮಾಡಲಾಗಿದೆ

ಆ) ವಿಶೇಷವಾಗಿ ಕಾರ್ಖಾನೆ ಮತ್ತು ಕಛೇರಿಗಳಿಗೆ ಹೋಗುವ ವೇಳೆಯಲ್ಲಿ ಎಲ್ಲಾ ಸಾರಿಗೆ ಸೇವೆಗಳನ್ನು ಓಡಿಸಲಾಗುತ್ತಿದ್ದು ಅವುಗಳ ಕಾರ್ಯಾಚರಣೆಯನ್ನು ಮುಂದುವರಿಸಲಾಗುವದು

ವಿಷಯ :-ಉಡುಪಿ ಜಿಲ್ಲೆ ರಚನೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :-೬೮೧ (೧೮೧೫)

ಶ್ರೀ ಪಿ. ಬಸವರಾಜ (ಬ್ರಹ್ಮಾವರ) :-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?